ಗಂಗಾವತಿ ತಾಲ್ಲೂಕಿನಲ್ಲಿ ಪಹಣಿ ನೀಡಿರುವವರಿಗೆ ಭೂಮಿ ನೀಡುವ ಬಗ್ಗೆ.

೨೮೩. ಶ್ರೀ ಶ್ರೀ ರಂಗದೇವರಾಯಲು ವಿ(ಕನಕಗಿರಿ).—ಮಾನ್ಯ ಕಂದಾಯ, ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಗಂಗಾವತಿ ತಾಲ್ಲೂಕಿನಲ್ಲಿ ಪಹಣಿ ತೆಗೆದುಕೊಂಡಿರುವ ಜನರೆಷ್ಟು (ವರ್ಷವಾರು ವಿವರ ನೀಡುವುದು).

ಆ) ಆ ಪೈಕಿ ಪಹಣಿ ಕೊಟ್ಟು ಭೂಸ್ವಾಧೀನ ಕೊಟ್ಟಿರುವುದಿಲ್ಲದ ಜನರ ಸಂಖ್ಯೆ ಎಷ್ಟು, ಮತ್ತು ಭೂಮಿಯನ್ನು ರದ್ದುಪಡಿಸಲಾಗಿರುವವರ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ)

ವರ್ಷ	ಪಹಣಿ ಸಂಖ್ಯೆ
೧೯೫೫–೫೬	೮೫
೧೯೫೬–೫೭	೪೩
೧೯೫೭–೫೮	೧೮
ಒಟ್ಟು	೧೪೬

ಆ) ಇಂತಹ ಪ್ರಕರಣಗಳು ಇರುವುದಿಲ್ಲ. ಎರಡು ಪ್ರಕರಣಗಳಲ್ಲಿ ಭೂ ಮಂಜೂರಾತಿಯನ್ನು ರದ್ದುಪಡಿಸಿ, ಸದರಿ ಭೂಮಿಯನ್ನು ಶಾಶ್ವತಾನಕ್ಕಾಗಿ ಕಾದಿರಿಸಲಾಗಿದೆ.

೧೧–೦೦ ಎ. ಎಂ.

ಶ್ರೀ ಶ್ರೀರಂಗದೇವರಾಯಲು ವಿ. .—ಮಾನ್ಯ ಮಂತ್ರಿಗಳು ಅಸೆಂಬ್ಲಿಯಲ್ಲಿ ತಪ್ಪು. ಮಾಹಿತಿ ಕೊಡುವಂತೆ ಹೇಳಿರುವ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೆ? ಭೂಮಿಯು ಸಾಗುವಳಿ ಚೀಟಿಯನ್ನು ಕೊಟ್ಟು ಆದರೆ ಭೂಮಿಯನ್ನು ಭೂಮಾಲೀಕರಿಗೆ ಕೊಟ್ಟಿದ್ದಾರೆ. ತಪ್ಪು ಮಾಹಿತಿ ಕೊಟ್ಟಿರುವ ಅಧಿಕಾರಿಗಳ ಬಗ್ಗೆ ಮಂತ್ರಿಗಳು ಕ್ರಮ ತೆಗೆದು ಕೊಳ್ಳುತ್ತಾರೆಯೆ?

ಶ್ರೀ ಎಸ್.ಆರ್. ಬೊಮ್ಮಾಯಿ.—ತಮ್ಮ ಹತ್ತಿರವಿರುವ ಮಾಹಿತಿಯನ್ನು ಕೊಡಿ. ಅಧಿಕಾರಿಗಳು ತಪ್ಪು ಮಾಡಿದ್ದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಶ್ರೀರಂಗದೇವರಾಯಲು.—ಸಾಗುವಳಿ ಚೀಟಿಯನ್ನು ಪಡೆದುಕೊಂಡಿರುವವರ ಹತ್ತಿರ ಪಹಣಿ ಎಲ್ಲಾ ಇದೆ, ಆದರೂ ಬೇರೆಯವರಿಗೆ ಮಂಜೂರು ಮಾಡಿದ್ದಾರೆ. ಕೆಲವು ಹಳ್ಳಿಗಳಲ್ಲಿ ತೊಂಬಾ ತೊಂದರೆಯಿದೆ. ಅಧಿಕಾರಿಗಳು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ ಅವರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ:—ಅಧಿಕಾರಿಗಳು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದರೆ ಕೂಡಲೇ ಈಗಲೇ ಕ್ರಮ ತೆಗೆದುಕೊಳ್ಳುತ್ತೇನೆ.